ದಿಃ02.08.2025 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಪಾಟೀ ಸವಾಲುಃ ಜೆ ಡಿ ಆರ್ ಪರವಾಗಿಃ ಶ್ರೀ ಡಿ ಕೆ ವಕೀಲರಿಂದಃ</u>

1. ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರವನ್ನು ಏತಕ್ಕಾಗಿ ಸಲ್ಲಿಸಿದ್ದೇನೆ ಎಂದು ನನಗೆ ಗೊತ್ತು. ಸದರಿ ಪ್ರಮಾಣಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ. ಸದರಿ ಪ್ರಮಾಣಪತ್ರದಲ್ಲಿ ನನಗಾದಂತ ಅಪಘಾತದ ಪರಿಹಾರದ ಹಣವನ್ನು ಕೊಡಿಸುವ ಸಲುವಾಗಿ ಹೇಳಿಕೊಂಡಿರುತ್ತೇನೆ. ತೀರ್ಪುಋಣಿ/ಎದುರುದಾರ ನಮ್ಮ ಪಕ್ಕದ ಊರಿನವನಾಗಿದ್ದು ಆತನ ವ್ಯಯಕ್ತಿಕ ಪರಿಚಯ ಇಲ್ಲ. ಆತನ ಕುಟುಂಬದ ಬಗ್ಗೆ ನನಗೆ ತಿಳಿದಿದೆ. ಆತನಿಗೆ ತಂದೆ ಇಲ್ಲ ತಾಯಿ ಇದ್ದು ಆತ ಅವಿವಾಹಿತನಾಗಿರುತ್ತಾನೆ. ಆತನಿಗೆ ಒಬ್ಬಳು ಸಹೋದರಿ ಇರುತ್ತಾಳೆ. ಆತನ ತಾಯಿಗೆ ಎರಡು ಗುಂಟೆ ಜಮೀನಿದ್ದು ಅದರಲ್ಲಿ ಮನೆ ಕಟ್ಟಿಕೊಂಡಿರುತ್ತಾರೆ.

2. ಆತನಿಗೆ ಆಸ್ತಿ ಇರುವ ಬಗ್ಗೆ ಮತ್ತು ಆದಾಯ ಇರುವ ಬಗ್ಗೆ ನಾನು ಪ್ರಮಾಣಪತ್ರದಲ್ಲಿ ಹೇಳಿಕೊಂಡಿರುವುದಿಲ್ಲ. ಆತನಿಗೆ ಯಾವುದೇ ಆದಾಯ ಮತ್ತು ಜಮೀನು ಇಲ್ಲದೇ ಇದ್ದರೂ ಸಹ ನಾನು ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ತೀರ್ಪುಋಣಿದಾರನಿಗೆ ಅಪಘಾತದ ನಂತರ ಪಾರ್ಶ್ವ ಹೊಡೆದು ಆತನ ದೇಹದ ಎಡ ಭಾಗ ಕೆಲಸ ಮಾಡುತ್ತಿಲ್ಲ ಎಂದರೆ ಸಾಕ್ಷಿ ಆತ ಚೆನ್ನಾಗಿದ್ದಾನೆ ಎಂದು ಉತ್ತರಿಸುತ್ತಾರೆ. ಆತ ಚೆನ್ನಾಗಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆತನಿಗೆ ಹೃದಯ ಖಾಯಿಲೆ ಇದೆ ಎಂದರೆ ಸರಿಯಲ್ಲ. ಎದುರುದಾರನಿಗೆ ಶಾರೀರಿಕ ತೊಂದರೆ ಇರುವ ಕಾರಣ ಆತನಿಗೆ ಯಾವುದೇ ಕೈ ಕೆಲಸ

ಮಾಡಿ ದುಡಿಮೆ ಮಾಡುವ ಸಾಮರ್ಥ್ಯವಿಲ್ಲ ಆ ಕಾರಣ ಆತನ ತಾಯಿಯೇ ಆತನನ್ನು ಸಾಕಿ ಸಲಹುತ್ತಿದ್ದಾಳೆ ಎಂದರೆ ಸರಿ. ನ್ಯಾಯ ಬೆಲೆ ಅಂಗಡಿಯಿಂದ ಪಡೆಯುವಂತಹ ಆಹಾರ ವಸ್ತುಗಳಿಂದ ಆತನ ತಾಯಿ ಆತನನ್ನು ಸಾಕುತ್ತಿದ್ದಾಳೆ ಎಂದರೆ ನನಗೆ ಗೊತ್ತಿಲ್ಲ. ಆತನಿಗೆ ಸಾಯುವವರೆಗೆ ಯಾವುದೇ ಕೆಲಸ ಮಾಡಲು ಆಗುವುದಿಲ್ಲ ಆತ ಕುಂತಲ್ಲೇ ಇರಬೇಕು ಎಂದರೆ ಸಾಕ್ಷಿ ಅದಕ್ಕೂ ನನಗೂ ಯಾವುದೇ ಸಂಬಂಧ ಇಲ್ಲ ಎಂದು ಉತ್ತರಿಸುತ್ತಾರೆ. ನಾನು ನನ್ನ ಪ್ರಮಾಣಪತ್ರದಲ್ಲಿ ಹೇಳಿಕೊಂಡಿರುವಂತಹ ಎರಡು ಗುಂಟೆ ಆಸ್ತಿಯಲ್ಲಿ ಯಾವುದೇ ಆದಾಯ ಬರುತ್ತಿಲ್ಲ ಹಾಗೂ ಎದುರುದಾರನ ತಾಯಿ ಸಹ ಅದರಿಂದ ಜೀವನ ನಡೆಸಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಸದರಿ ಎರಡು ಗುಂಟೆ ಆಸ್ತಿಯಲ್ಲಿ ಅವರ ಇರುವಿಕೆಗಾಗಿ ಒಂದು ಮನೆ ಮಾಡಿಕೊಂಡಿದ್ದು ಅದರಿಂದ ಯಾವುದೇ ಆದಾಯ ಬರುವುದಿಲ್ಲ ಎಂದರೆ ಸರಿಯಲ್ಲ. ಅದರಲ್ಲಿ ಮನೆ ಕಟ್ಟಿ ಬಾಡಿಗೆಗೆ ಕೊಟ್ಟಿಲ್ಲ ಎಂದರೆ ಸರಿ. ಎದುರುದಾರನಿಗೆ ಅಂಗ ನ್ಯೂನತೆ ಇದ್ದು ಆತನಿಗೆ ಯಾವುದೇ ದುಡಿಮೆ ಮಾಡಲು ಸಾಧ್ಯವಿಲ್ಲದೇ ಇದ್ದರೂ ಸಹ ಆತನಿಗೆ ಆದಾಯ ಇದೆ ಎಂದು ಸುಳ್ಳಾಗಿ ಹೇಳಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಈ ಅಮಲು ಜಾರಿ ಅರ್ಜಿಯಿಲ್ಲಿ ಕೇಳಿರುವಂತಹ ಹಣವನ್ನು ಎದುರುದಾರನಿಗೆ ಕೊಡಲು ಸಾಮರ್ಥ್ಯವಿಲ್ಲ ಹಾಗೂ ಆತನಿಂದ ಯಾವುದೇ ಹಣ ಕೊಡಲು ಆಗುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಪಂಚಾಕ್ಷರಿ.ಎಂ.)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.